

ಲೈಬ್ರರಿ ನಿಶ್ಶಬ್ದವಾಗಿತ್ತು. ಒಂದಷ್ಟು ಜನ ತಮ್ಮದೇ ಪ್ರಪಂಚದಲ್ಲಿ ಕಳೆದುಹೋಗಿದ್ದರು. ನಾನು ಬೇಕಾದ ಪುಸ್ತಕ ಆಯ್ಕೆ ಮಾಡಿಕೊಂಡೆ.

ರಾವ್ ತೀರಿಕೊಂಡ ಮೇಲೆ ಈ ಓದು–ಬರಹಗಳೇ ನನಗೆ ವರವಾಗಿವೆ.

ಲೈಬ್ರರಿಯಿಂದ ಹಿಂದಿರುಗುವಾಗ, 'ನೀವು ಶಾಲಿನಿ ರಾವ್ ಅಲ್ವಾ? ನಿಮ್ಮ ಕಾದಂಬರಿ 'ಮುಗಿಲ ಬಳ್ಳಿ' ಮೊನ್ನೆ ಸಿಕ್ಕಿತ್ತು. ನಿಮ್ಮ ಚಿತ್ರ ಗಮನಿಸಿದ್ದೆ. ಓದಿ ಖುಷಿ ಆಯ್ತು... ನಿಮ್ಮ ಕೃತಿಗಳನ್ನು ಓದುವಾಸೆ' ಎಂದು ಕೈಮುಗಿದ. 'ಭ್ರಮರ ಪ್ರಕಾಶನದಲ್ಲಿ ಲಭ್ಯವಿದೆ' ಎಂದೆ. 'ನಿಮ್ಮ ಕಾದಂಬರಿ ಓದಿ ಪಕ್ಕಾ ಅಭಿಮಾನಿಯಾದೆ, ಬರಹ ಹೃದಯಸ್ಪರ್ಶಿ, ನಾನು ಸಂಜಯ್, ವಿದೇಶದಲ್ಲಿ ಇದ್ದೇನೆ. ಈ ಲೈಬ್ರರಿ ನನಗೆ ಪ್ರಿಯವಾದ ತಾಣ, ಮತ್ತೆ ಬರುವ ವಾರ ಹೊರಟೆ' ಅಂದ. 'ಒಳ್ಳೆಯದಾಗ್ಲಿ' – ಕೈ ಮುಗಿದೆ.

'ನೀವು ತಪ್ಪು ತಿಳಿಯದಿದ್ದರೆ, ನಿಮ್ಮ ನಂಬರ್ ಕೊಡಲು ಸಾಧ್ಯವೆ?' ಕೇಳಿದ.

ಆತ್ಮೀಯಭಾವ ಆ ಕಣ್ಣುಗಳಲ್ಲಿ! ನಂಬರ್ ಕೊಟ್ಟು ರಸ್ತೆಗಿಳಿದೆ.

ಬೆಳಗು ಮೂಡುತ್ತಲೇ ಆಫೀಸ್‌ಗೆ ಹೊರಡುವ ತರಾತುರಿ. ಸೊಸೆ ಮಾಧವಿ ತಂದಿಟ್ಟ ತಿಂಡಿ–ಕಾಫಿ ಮುಗಿಸಿದೆ. ಡ್ರೈವರ್ ಹಾರನ್ ಕೇಳಿ, ಮಗ ಸೊಸೆ, ನನ್ನ ಮುದ್ದು ನಿಹಾರಿಕಳಿಗೆ ಕೈ ಬೀಸಿ ಹೊರಟೆ.

ಚೇಂಬರ್‌ಗೆ ಹೋಗುವ ಮುನ್ನ, ಮತ್ತೆ ವಾಸಂತಿ ಕುರ್ಚಿ ಖಾಲಿಯೇ ಇತ್ತು. ನಾಲ್ಕಾರು ಸಲ ಓಡಾಡಿದೆ, ಅವಳು ಕಾಣಲಿಲ್ಲ. ವಾರವಾಗಿದೆ. ರಜಾ ಕೇಳಿದ್ದೂ ನೆನಪಿಲ್ಲ. ಯಾರನ್ನು ಕೇಳುವುದೇನು? ಭೀಮರಾವ್ ಬಂದಿರಬೇಕು, ಅವರ ಹೆಂಡತಿಯಲ್ಲವೆ? ಅನಿಸಿ ಎದ್ದು ಅವರ ಚೇಂಬರ್ ಕಡೆ ಹೊರಟೆ.

ಭೀಮರಾವ್ ಕುರ್ಚಿಗೊರಗಿ ಮಲಗಿದ್ದರು! ಏನಿದು ಎಂದೂ ಹೀಗೆ ಮಾಡಿಲ್ಲ? ಪ್ರಾಮಾಣಿಕ ವ್ಯಕ್ತಿ ಈತ! ಬಾಗಿಲಿಗೆ ನನ್ನ ಕೈ ತಾಕಿದ್ದೇ, ಎದ್ದು 'ಸಾರಿ ಮೇಡಂ' ಅಂದ್ರು. 'ಭೀಮರಾವ್ ಅವರೇ ಆರೋಗ್ಯ ಸರಿ ಇಲ್ವಾ? ವಾಸಂತಿ ಆರೋಗ್ಯ?' ಎಂದೆ.

ಭೀಮರಾವ್ ಕಣ್ಣಲ್ಲಿ ನೀರು. ಎದುರಿಗಿದ್ದ ಕುರ್ಚಿಯಲ್ಲಿ ಕೂತೆ.

ಮೊಬೈಲ್ ನನ್ನ ಕೈಗಿಟ್ಟು, 'ವೈಫ್ ಸಂದೇಶ ನೋಡಿ ಮೇಡಂ' ಅಂದ್ರು. ಅನುಮಾನಿಸಿದೆ. 'ದಯವಿಟ್ಟು...' ಅವರ ಬೇಡಿಕೆಯಾಗಿತ್ತು.

'ನನ್ನನ್ನು ಮರೆತು ಬಿಡಿ' – ಏಳು ದಿನಗಳೂ ಒಂದೇ ರೀತಿಯ ಮೆಸೇಜ್! ಭೀಮರಾವ್ ಕಡೆ ನೋಡಿದೆ.

'ನೋಡಿದ್ರಾ? ಅವಳು ನನಗೆ, ಮಕ್ಕಳಿಗೆ, ಎಲ್ಲರಿಗೂ ಕೈಕೊಟ್ಟು ಈ ದೇಶವನ್ನೇ ಬಿಟ್ಟುಹೋಗಿದ್ದಾಳೆ ನೋಡಿ' ಅನ್ನುವಾಗ ನಿಜಕ್ಕೂ ಆತನ ಕಣ್ಣು ತುಂಬಿತ್ತು. ನಾನು ಹಿಮದಗಡ್ಡೆಯಾಗಿದ್ದೆ. 'ಮೇಡಂ... ನಾನು ಹೇಗೊ ಬಿಡಿ, ಆದ್ರೆ ಮಕ್ಕಳು... ನನ್ನ ವಯಸ್ಸಾದ ತಾಯಿ, ನನ್ನ ಪುಟ್ಟ ತಂಗಿ?' – ಧ್ವನಿಯಲ್ಲಿ ಇಡೀ ಭವಿಷ್ಯವೇ ಸುಟ್ಟ ವೇದನೆ.

'ನನ್ನ ನೋವು ಯಾರಿಗೆಂದು ಹೇಳಲಿ ಮೇಡಂ? ನಗ್ತಾರಷ್ಟೆ.'

'ಮುಂದೆ?' ಕೇಳಿದೆ.

'ಗೊತ್ತಿಲ್ಲ ಮೇಡಂ.'

'ಯಾವ ದೇಶ? ಏನಾದ್ರೂ ಸುಳಿವು?'

'ಮಕ್ಕಳ ಮೇಲೂ ಇತ್ತೀಚೆಗೆ ಗಮನ ಇರಲಿಲ್ಲ ಅಂತ ಅಮ್ಮಾ ಹೇಳ್ತಾ ಇದ್ಲು. ಅತ್ತಿಗೆ ಸದಾ ಮೊಬೈಲ್ ಎಂದು ತಂಗಿ ಶಾರಿ ಹೇಳಿದ್ಲು. ಅವಳ ನಡೆ ನುಡಿಯಲ್ಲಿ ನನಗೆ ವ್ಯತ್ಯಾಸ ಕಾಣಲಿಲ್ಲ.'

'ಇಂಟರ್ನೆಟ್ ಪರಿಚಯ!?'

'ಅನುಮಾನವೇ ಇಲ್ಲ' – ಅವರು ನಿಟ್ಟುಸಿರಿಟ್ಟರು.

'ಒಂದು ಕೆಲಸ ಮಾಡಿ, ಬೇಕಾದ್ರೆ ರಜಾ ತೆಗೆದುಕೊಂಡು...'

ಮಾತು ಮುಗಿಯಲೇ ಇಲ್ಲ. 'ಮೇಡಂ ಹುಚ್ಚು ಹಿಡಿಯುತ್ತೆ ಅಷ್ಟೆ. ಸದಾ ಗೊಣಗುಟ್ಟುವ ಅಮ್ಮ, ಅಳುವ ಮಕ್ಕಳು...'

ಆತನ ವಿಲಕ್ಷಣ ನಗೆ ಕಂಡು, 'ಕೆಲಸದ ಒತ್ತಡ ಬೇಡ' ಅಂದು ಸೀಟಿಗೆ ಬಂದೆ.

ವಾಸಂತಿಯ ಮುಖ ಕಾಡಿತು. ಮನೆಗೆ, ರಾತ್ರಿ ಹಾಸಿಗೆಗೆ ಬಂದಾಗಲೂ 'ನನ್ನನ್ನು ಮರೆತುಬಿಡಿ...' ಇರುವುದೆಲ್ಲಾ ಬಿಟ್ಟ ವಾಸಂತಿ ಆ ಅವನ ಸೆಳೆತಕ್ಕೆ!?

ನೋಡಕ್ಕೆ ಚೆನ್ನಾಗಿದ್ದಳು, ಆ ಮಾರು ಜಡೆಯ ಮುಡಿಗೆ ಗಂಡ ನಿತ್ಯ ತರುತ್ತಿದ್ದ ಹೂವು, ಮುಖದಲ್ಲಿ ಸದಾ ನಗು. ಈಗ ಭೀಮರಾವ್ ಪರಿಸ್ಥಿತಿ? ನಗಾಡುವ ಜನ, ತಾಯಿ ಗೋಳಾಟ, ಮಕ್ಕಳ ಕಿರಿಕಿರಿ, ಯಾವುದೆಂದು ಸಹಿಸಿಯಾನು ಪಾಪ?

ಬೆಳಿಗ್ಗೆ ಭೀಮರಾವ್ ಮನೆ ಕಡೆ ಹೊರಟೆ.

ಚಪ್ಪಲಿ ಬಿಡುವಾಗಲೇ ಲಲಿತಮ್ಮನ ಮಾತು – 'ಅವಳ ಪಿಂಡ ನಾಯಿ ತಿನ್ನಾ, ನನ್ನನ್ನು ಮರೆತು ಬಿಡಿ... ನೀನು ಸರಿ ಇಲ್ಲ ಬಿಡು ಭೀಮೂ, ಈಗ ಮಕ್ಕಳ ಗತಿ? ಪಾಸ್‌ಪೋರ್ಟ್ ಮಾಡಿಸಿ ಮಣ್ಣು ಸುರ್ಕೊಂಡಿ. ಚಂಡಾಲಿಗೆ ದೊಡ್ಡರೋಗ ಬಂತು.'

ಭೀಮರಾವ್ ಒಂದಕ್ಕೂ ಉತ್ತರ ಕೊಡಲಿಲ್ಲ. ನಾನು ಕೆಮ್ಮಿದಂತೆ ಮಾಡಿ ಅಡಿ ಇಟ್ಟೆ.

'ಶಾಲಿನಿ ಮೇಡಂ!'

ಅಳುತ್ತಿದ್ದ ಮಕ್ಕಳು, ಭೀಮರಾವ್ ನಗಲೆತ್ನಿಸುತ್ತಾ 'ಓ... ಬನ್ನಿ ಮೇಡಂ' ಎಂದು ಸ್ವಾಗತಿಸಿದರು. ನನಗೇ ದುಡುಕಿದೆ ಅನಿಸಿತು, ಸೋಫಾ ತೋರಿದರು. ಭೀಮರಾವ್ 'ಶಾರೀ' ಎಂದು ಕೂಗಿ, ಮಕ್ಕಳನ್ನು ತಂಗಿಗೆ ಒಪ್ಪಿಸಿ, ಎದುರಿಗೆ ಕೂತು, 'ನೋಡಿ' ಎಂದು ಮೊಬೈಲ್ ಚಾಚಿದರು – 'ನನ್ನನ್ನು ಮರೆತು ಬಿಡಿ.'

ಕಾಫಿ ತಂದ ಲಲಿತಮ್ಮ ಅಳುತ್ತಾ ನಿಂತರು. 'ನೀವೇ ಹೀಗೆ ಅತ್ತರೆ ಗತಿ?' ಎಂದೆ.

'ಎಲ್ಲಾ ಇವನದೇ ತಪ್ಪು. ಅವಳತ್ತ ಗಮನಿಸಲಿಲ್ಲ.' ಆಕೆ ಬಿಕ್ಕಿದರು.

ಭೀಮರಾವ್ ಕಡೆ ತಿರುಗಿ, 'ಯಾವ ದೇಶ? ಯಾರಾತ?' ಕೇಳಿದೆ.

'ಎಲ್ಲಾದ್ರೂ ಹಾಳಾಗ್ಹೋಗ್ಲಿ. ನಿಜ ಹೇಳ್ಲಾ? ನನಗೆ ಹೋಗಿರೊ ಇವಳಿಗಿಂಥ, ಆ ನನ್ನ ಮಗ, ಇವಳ್ನ ಕರ್ಕೊಂಡು ಹೋಗಿದಾನಲ್ಲಾ ಅವನ ಗತಿ